# ಮೌನ ಮಂಟಪ

ಡಿ.ಎನ್.ಗೀತಾ

## ಕೆರೆದಂಡೆ ಮೇಲೆ ವಾಕಿಂಗ್

ಹೇಮಂತನ ಕೊನೆಯ ಮಾತಿಗೆ ಬೆಚ್ಚಿದಳು ಋತು.

‘ಹೀಗೂ ಸಾಧ್ಯವೇ? ತನ್ನನ್ನು ಪ್ರಾಣಕ್ಕಿಂತ ಹೆಚ್ಚಾಗಿ ಪ್ರೀತಿಸುವ ಚಿಕ್ಕಮ್ಮನೇ ಕಪಟ ನಾಟಕವಾಡುತ್ತಿದ್ದಾರೆಯೇ?....ಅದರಿಂದ ಅವರಿಗೇನು ಲಾಭವಿದೆ?’

‘ಋತು ಗುಗ್ಗು ತರಾ ಮಾತಾಡ್ಬೇಡ, ನೀನು ಈ ಕೋಟೆ ಬಂಗಲೆಯ ಸಮಸ್ತ ಆಸ್ತಿಗೆ ಉತ್ತರಾಧಿಕಾರಿ, ನೀನು ಮದ್ವೆಯಾಗಿ ಹೊರಹೋದ್ರೆ ಆಸ್ತಿಯೂ ನಿನ್ನ ಹಿಂದೆ ಹೋಗುತ್ತೆ ಅನ್ನೋ ಭಯ ಇರಬಹುದು, ಯಾವುದನ್ನೂ ಖಂಡಿತವಾಗಿ ಈಗ್ಲೇ ಹೇಳೋಕಾಗಲ್ಲ, ಆದ್ರೆ ನೀನು ಧೈರ್ಯವಾಗಿರ್ಬೇಕು, ಎಂಥ ಪರಿಸ್ಥಿತಿ ಬಂದ್ರೂ ಎದುರಿಸ್ಬೇಕು, ನಿಂಗೆ ಬೆಂಬಲವಾಗಿ ಯಾವಾಗ್ಲೂ ನಾನಿರ್ತೀನಿ, ಪ್ಲೀಸ್ ಋತು, ನಮ್ಮ ಪ್ರೀತಿ ಉಳಿಯಬೇಕಂದ್ರೆ ನೀನು ಗಟ್ಟಿಯಾಗ್ಬೇಕು....’

ಗೋಗರೆದ ಹೇಮಂತ. ಅವನ ಮಾತುಗಳು ಅವಳ ಮನಸ್ಸನ್ನು ತಟ್ಟಿದವು. ಹೌದು...ತಾನಿನ್ನು ಹೆದರಬಾರದು. ಹೇಮಂತನ ಪ್ರೀತಿಯಲ್ಲೇ ತಾನು ಬೆಳೆಯಬೇಕು, ಬೆಳೆದು ಗಟ್ಟಿಯಾಗಬೇಕು....ಮೊದಲ ಬಾರಿಗೆ ಅವಳ ಕಣ್ಣುಗಳು ಆತ್ಮವಿಶ್ವಾಸದಿಂದ ಅರಳಿದವು. ನಿರಾಳವಾದ ಮನಸ್ಸಿನಿಂದ ಹೇಮಂತನ ಹತ್ತಿರ ಸರಿದಳು. ಅವನು ತನ್ನ ಬಾಹುಗಳಲ್ಲಿ ಅವಳನ್ನು ಬಿಗಿದಪ್ಪಿಕೊಂಡ. ಆ ಸ್ಥಿತಿಯಲ್ಲಿ ಸ್ವಲ್ಪ ಹೊತ್ತು ಇಬ್ಬರೂ ಸುತ್ತಲಿನ ಇರವನ್ನೇ ಮರೆತರು.

‘ಇನ್ನು ಹೋಗೋಣ ಋತು, ಕಲಾವತಿ ಆಂಟಿ, ರಮ್ಯ ತಿಂಡಿ ಮಾಡಿಕೊಂಡು ಬರುವ ಹೊತ್ತಿಗೆ ನಾವು ಅಲ್ಲಿರ್ಬೇಕಲ್ಲ, ಇವತ್ತಿಗೆ ಇಷ್ಟು ಸಾಕು ಅನ್ಸುತ್ತೆ...’ ಹೇಮಂತ ಕೀಟಲೆ ಮಾಡುತ್ತಾ ಅವಳ ತುಂಬಿದ ಕೆನ್ನೆಗಳನ್ನೊಮ್ಮೆ ಮೃದುವಾಗಿ ಚುಂಬಿಸಿ ಅವಳನ್ನು ಬಿಟ್ಟೆದ್ದ.

